

# ಸರಯೂ

ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**Vol. : 8 Issue : 10 Month - March** 5123/ ಪ್ಲವ ಸಂವತ್ಸರ ಮಾರ್ಚ್ 2022 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ತ ರಥಸಪ್ತಮಿ ಅಂಗವಾಗಿ ದೇಶದಾದ್ಯಂತ 75ಕೋಟಿ ಸೂರ್ಯನಮಸ್ಕಾರ
## ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕದ 3200 ವಿದ್ಯಾರ್ಥಿಗಳಿಂದ ಭಗವಾನ್ ಭಾಸ್ಕರನಿಗೆ ನಮನ

07.02.2022



### ಶಾಲಾಂಗಣದಲ್ಲಿ ಉದಯಿಸಿದ ಬಾಲಸೂರ್ಯನ ಬಾನ ನೋಟ

ವಿವಿಧ ವಿಭಾಗಗಳಲ್ಲಿ ನಡೆದ ಸೂರ್ಯನಮಸ್ಕಾರಗಳ ಅಂಕಿ ಅಂಶ

| | |
|---|---|
| ಪ್ರಾಥಮಿಕ ಶಾಲೆ | 42157 |
| ಪ್ರೌಢಶಾಲೆ | 19320 |
| ಪದವಿಪೂರ್ವ | 5175 |
| ಪದವಿ | 2420 |
| ಪೋಷಕರು | 735 |
| ಒಟ್ಟು | 69807 |

ಸಭಾ ಕಾರ್ಯಕ್ರಮದಲ್ಲಿ ಪ್ರಗತಿಪರ ಕೃಷಿಕರಾದ ಶ್ರೀ ಲಕ್ಷ್ಮೀನಾರಾಯಣ ಪರಾಡ್ಕರ್, ಡಾ. ಪ್ರಭಾಕರ ಭಟ್ ಕಲ್ಲಡ್ಕ ಶ್ರೀ ವಸಂತ ಮಾಧವ, ಡಾ. ಕಮಲಾ ಪ್ರ.ಭಟ್, ಆಡಳಿತ ಮಂಡಳಿ ಸದಸ್ಯರು ಹಾಗೂ ವಿಭಾಗ ಪ್ರಮುಖರು, ಶಿಕ್ಷಕರು, ಶಿಕ್ಷಕೇತರರು ಉಪಸ್ಥಿತರಿದ್ದರು.


# SRI RAMA SECONDARY SCHOOL, KALLADKA

**ENGLISH MEDIUM 9 - 12 Standard (AS PER N.E.P)**

* Smart Class Room
* Midday Meal
* School Bus
* Coaching class
* Laboratary
* Yoga Class
* Spoken English class
* Library
* Hostel



ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ 9ನೇ ತರಗತಿಯಿಂದಲೇ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಸಜ್ಜುಗೊಳ್ಳುವಂತೆ ಹಾಗೂ ಸಂಸ್ಕಾರ ಮತ್ತು ಜೀವನ ಮೌಲ್ಯಗಳನ್ನು ಮೈಗೂಡಿಸಿಕೊಂಡು ಬೆಳೆಯಲು ಅವಕಾಶವಿರುವ ಏಕಮಾತ್ರ ವ್ಯವಸ್ಥೆ ಇದಾಗಿದೆ. ಬನ್ನಿ ಭವಿಷ್ಯವನ್ನು ರೂಪಿಸಿಕೊಳ್ಳಿ.

7760 345 977



## ಶಿಶುಮಂದಿರ



ಮಾತೃಮಂಡಳಿ 4.2.22: ದೇಶಭಕ್ತಿಗೀತೆ, ಕಬೀರನ ದೋಹೆ, ಸರ್ವಜ್ಞನ ವಚನ, ಶ್ಲೋಕಗಳು, ಆಟ, ಕಥೆ, ರಸಪ್ರಶ್ನೆಗಳೊಂದಿಗೆ ನಡೆದ ಮಾತೃಮಂಡಳಿಯಲ್ಲಿ 28 ಮಾತೆಯರು ಪಾಲ್ಗೊಂಡಿದ್ದರು.



ಷಣ್ಮುಖ ಸುಬ್ರಹ್ಮಣ್ಯ ದೇವಸ್ಥಾನ ಸಜಿಪ ಮತ್ತು ಭಯಂಕೇಶ್ವರ ದೇವಸ್ಥಾನ ಪಾಣೆಮಂಗಳೂರಿಗೆ 21.2.22ರಂದು ಆಯೋಜಿಸಿದ ಹೊರಸಂಚಾರದಲ್ಲಿ 142 ಮಕ್ಕಳು 3 ಆಡಳಿತ ಮಂಡಳಿ ಸದಸ್ಯರು 9 ಮಾತಾಜಿಗಳು ಭಾಗವಹಿಸಿದರು.



ರಥಸಪ್ತಮಿ ಅಂಗವಾಗಿ ದಿನಾಂಕ 07.2.2022ರಂದು ಶಿಶುಮಂದಿರದ ಮಕ್ಕಳಿಂದ ಸೂರ್ಯನಮಸ್ಕಾರ ಹಾಗೂ ವಿವಿಧ ಲಘು, ಸರಳ ಯೋಗಾಸನ ಪ್ರದರ್ಶನ ನಡೆಯಿತು.

## ಪ್ರಾಥಮಿಕ ಶಾಲೆ



ರಥಸಪ್ತಮಿ ಅಂಗವಾಗಿ ಸೂರ್ಯನಮಸ್ಕಾರ ಸಪ್ತಾಹದಲ್ಲಿ 1ರಿಂದ 7ನೇ ತರಗತಿಯವರೆಗಿನ 1136 ವಿದ್ಯಾರ್ಥಿಗಳು 42,157 ಬಾರಿ ಹಾಗೂ 87 ಪೋಷಕರು 735 ಬಾರಿ ಸೂರ್ಯನಮಸ್ಕಾರವನ್ನು ಮಾಡಿದರು. ಶ್ರೀ ಸುಧೀಂದ್ರ ಹಾಗೂ ಶ್ರೀ ಪಿ.ಕೆ ಪದ್ಮನಾಭ ನಡೆಸಿಕೊಟ್ಟರು.



ಕೆಡ್ಡಸ ಆಚರಣೆ 12.2.2022: ಊರಿನ ಹಿರಿಯರಾದ ಶ್ರೀಮತಿ ಜಯಂತಿಯವರು ಭೂಮಿಗೆ ಎಣ್ಣೆ, ಹಾಲು ಹಾಕಿ ತುಳುನಾಡಿನ ವಿವಿಧ ಭಕ್ಷ್ಯಗಳನ್ನು(ಸಾರ್ನಡ್ಡೆ) ಬಡಿಸಿದರು. ಡಾ।ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ಡಾ। ಕಮಲಾ ಪ್ರಭಾಕರ್ ಭಟ್ ಹಾಗೂ ಪೋಷಕರಾದ ಶ್ರೀಮತಿ ಯಶಸ್ವಿನಿ ಜೊತೆಗಿದ್ದರು.



ಮಾತೃಭಾಷಾ ದಿನಾಚರಣೆ 21.2.2022 : ಶ್ರೀರಾಮ ಪ.ಪೂ. ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಶ್ರೀ ಮಹೇಶ್ವರ ಭಟ್, ಮಾತೃಭಾಷೆಯ ಮಹತ್ವವನ್ನು ತಿಳಿಸಿದರು. ಕೆ.ಎಸ್.ಆರ್.ಟಿ.ಸಿ ಚಾಲಕ ಶ್ರೀ ದಯಾನಂದ ಹಾಗೂ ಹಿರಿಯ ವಿದ್ಯಾರ್ಥಿನಿ ಶ್ರೀಮತಿ ಅಕ್ಷತಾ ಶೆಣೈ ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.









ಪೂರ್ವಗುರುಕುಲ ಪ್ರವಾಸ : 23.2.2022ರಂದು 1ನೇ ತರಗತಿಯ 152 ವಿದ್ಯಾರ್ಥಿಗಳು, 7 ಅಧ್ಯಾಪಕರು, 15.2.2022ರಂದು 2ನೇ ತರಗತಿಯ 121 ವಿದ್ಯಾರ್ಥಿಗಳು 7 ಅಧ್ಯಾಪಕರು ವಿಟ್ಲ ಪಂಚಲಿಂಗೇಶ್ವರ ದೇವಸ್ಥಾನ ಹಾಗೂ ಒಡಿಯೂರು ದತ್ತಾತ್ರೇಯ ಕ್ಷೇತ್ರಕ್ಕೆ ಭೇಟಿ ನೀಡಿ–ದರು. 17.2.2022ರಂದು 3ನೇ ತರಗತಿಯ 160 ವಿದ್ಯಾರ್ಥಿಗಳು ಶ್ರೀಕ್ಷೇತ್ರ ಕಾರಿಂಜ, ವಾಮದಪದವಿನ ದುರ್ಗಾಪರಮೇಶ್ವರಿ ದೇವಸ್ಥಾನ, 15.2.2022ರಂದು 4ನೇ ತರಗತಿಯ 168 ವಿದ್ಯಾರ್ಥಿಗಳು 6 ಅಧ್ಯಾಪಕರು ಶ್ರೀಕ್ಷೇತ್ರ ಕಾರಿಂಜ, ಸಾಲುಮರದ ತಿಮ್ಮಕ್ಕ ವೃಕ್ಷ ಉದ್ಯಾನವನ ಮತ್ತು ನಂದಾವರ ದೇವಸ್ಥಾನಕ್ಕೆ ಭೇಟಿ ನೀಡಿದರು.

## ಪ್ರೌಢಶಾಲೆ



**ರಥ ಸಪ್ತಮಿ 07.02.22**

ಸೂರ್ಯನಮಸ್ಕಾರದ ಮಹಾ ಯಜ್ಞದಲ್ಲಿ 840 ವಿದ್ಯಾರ್ಥಿಗಳು ಭಾಗವಹಿಸಿ ಒಟ್ಟು 19,320 ಸೂರ್ಯನಮಸ್ಕಾರಗಳನ್ನು ಸಂವಿತ್‌ನ ಪ್ರಮುಖರಾದ ಶ್ರೀ ಸಂಜಯ ಸಿ.ಬಿ ಇವರ ಮಾರ್ಗದರ್ಶನದಲ್ಲಿ ಮಾಡಿದರು.



**ಪ್ರಾರ್ಥನೆಯ ಅರ್ಥ–ಮಹತ್ವ 08.02.22:** ಭಾರತ ಸರಕಾರದ ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ, ದೆಹಲಿ ಸರ್ಕಾರದ ನಿವೃತ್ತ ಮಾಹಿತಿ ತಂತ್ರಜ್ಞಾನದ ಸಲಹೆಗಾರ ಶ್ರೀ ಸಿ.ವಿ ಗೋಪಿನಾಥ್ ಮೈಸೂರು ವಿದ್ಯಾರ್ಥಿಗಳಿಗೆ ದೈನಂದಿನ ಸರಸ್ವತಿ ವಂದನೆಯ ಭಾವಾರ್ಥವನ್ನು ತಿಳಿಸಿಕೊಟ್ಟರು.



ದಶಂಬರ ಹಾಗೂ ಜನವರಿ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ, ಹಾಗೂ ಅಕ್ಷರ ಕೋಚಿಂಗ್ ಸೆಂಟರ್‌ನ ವತಿಯಿಂದ ನಡೆದ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣಾ ಕಾರ್ಯಕ್ರಮ ದಿನಾಂಕ 10.2.2022ರಂದು ನಡೆಯಿತು.

## ಸುಭಾಷಿತ ಮಂಜರಿ

ಪರೋಪದೇಶೇ ಪಾಂಡಿತ್ಯಂ
ಸರ್ವೇಷಾಂ ಸುಕರಂ ನೃಣಾಂ ।
ಧರ್ಮೇ ಸ್ವೀಯಮನುಷ್ಠಾನಂ
ಕಸ್ಯಚಿತ್ತು ಮಹಾತ್ಮನಃ

ಸಮಯೋಚಿತಪದ್ಯಮಾಲಿಕಾ

ಪರೋಪಕಾರ ಮಾಡುವಾಗ ಪಾಂಡಿತ್ಯವನ್ನು ಮೆರೆಸುವುದು ಎಲ್ಲರಿಗೂ ಸುಲಭ. ತಾನು ಧರ್ಮದಲ್ಲಿ ನಡೆಯುವುದು ಒಬ್ಬ ಮಹಾತ್ಮನಿಗೆ ಮಾತ್ರ ಸಾಧ್ಯವಾದೀತು.

### ಸಂಪಾದಕೀಯ

ಆತ್ಮೀಯ ಓದುಗರೆ,

ಶೈಕ್ಷಣಿಕ ವರ್ಷದ ಕೊನೆಯ ಹಂತದಲ್ಲಿ ಇದ್ದೇವೆ. ಕ್ರೀಡೋತ್ಸವಗಳಂತಹ ಬೃಹತ್ ಕಾರ್ಯಕ್ರಮ ಈ ವರ್ಷ ನಡೆದಿಲ್ಲವಾದರೂ ಅದನ್ನೇ ನೆನಪಿಸುವ ಸಾಮೂಹಿಕ ಸೂರ್ಯನಮಸ್ಕಾರದ ವರದಿ ಈ ಸಂಚಿಕೆಯಲ್ಲಿದೆ. ಇದರೊಂದಿಗೆ ಪದ್ಮಶ್ರೀ ಪುರಸ್ಕೃತ ಶ್ರೀ ಮಹಾಲಿಂಗ ನಾಯ್ಕರ ಭೇಟಿ, ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ನಡೆದ ವಿವಿಧ ಕಾರ್ಯಕ್ರಮಗಳ ವರದಿ ಇದೆ.

ಮುಂದಿನ ಶೈಕ್ಷಣಿಕ ವರ್ಷದಲ್ಲಿ ಆರಂಭಿಸಲು ಉದ್ದೇಶಿಸಿರುವ 9ರಿಂದ 12ನೇ ತರಗತಿಯವರೆಗಿನ ಸೆಕೆಂಡರಿ ಸ್ಕೂಲ್(ಇಂಗ್ಲೀಷ್ ಮಾಧ್ಯಮ) ಮಾಹಿತಿಯೊಂದಿಗಿನ ಸರಯೂ ಇದಾಗಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ಕೊಟ್ರೇಶ್ (ಪ್ರೌಢಶಾಲೆ)
ಲತಾ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


# ಕಥನ 32

ಶ್ರೀರಾಮ ವಿದ್ಯಾಕೇಂದ್ರ
# ಕಥನವಾಹಿನಿ
ನಿರೂಪಣೆ
ಡಾ। ಪ್ರಭಾಕರ ಭಟ್, ಕಲ್ಲಡ್ಕ

**(ವಿದ್ಯಾಕೇಂದ್ರದ ಚಿಂತನೆಯ ಮೂಲ, ಹುಟ್ಟು, ಬೆಳವಣಿಗೆ – ಸವಾಲುಗಳ ಕಥೆ)**

## ಪ್ರೌಢಶಾಲಾ ಬೆಳವಣಿಗೆ – 2

1990ರ ಆಸುಪಾಸಿನಲ್ಲಿ ಪ್ರೌಢಶಾಲಾ ವಿಭಾಗದ ಎಲ್ಲಾ ಕಾರ್ಯಚಟುವಟಿಕೆಗಳಿಗೂ ಒಂದು ಸ್ಪಷ್ಟರೂಪ ಸಿಗಲಾರಂಭಿಸಿತು. ದೈನಂದಿನ ಪ್ರಾರ್ಥನೆಯಲ್ಲಿ ಅಖಂಡ ವಂದೇಮಾತರಂ ಹಾಗೂ ಐಕ್ಯಮಂತ್ರಗಳನ್ನು ಹೇಳಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ವಿದ್ಯಾಭಾರತಿ ಅಖಿಲ ಭಾರತಿಯ ಶಿಕ್ಷಾ ಸಂಸ್ಥಾನಕ್ಕೆ ಸಂಸ್ಥೆ ಸಂಲಗ್ನಗೊಂಡಿತು. ಇದರೊಂದಿಗೆ ವಿದ್ಯಾಭಾರತಿಯ ದೈನಂದಿನ ಪ್ರಾರ್ಥನೆ ಸರಸ್ವತಿ ವಂದನಾವನ್ನು ಅಳವಡಿಸಿಕೊಂಡು ಇನ್ನಷ್ಟು ಪರಿಣಾಮಕಾರಿಯಾಗಿ ಮುಂದುವರೆಯಲು ಸಾಧ್ಯವಾಯಿತು.

2000ದ ಹೊತ್ತಿಗೆ ಎಲ್ಲಾ ವಿದ್ಯಾರ್ಥಿಗಳು ಒಟ್ಟಾಗಿ ಪ್ರಾರ್ಥನೆಗೆ ಸೇರಲು ಅಗತ್ಯವಿರುವ ಸಭಾಂಗಣವೊಂದನ್ನು ರಚಿಸುವ ಸಂಕಲ್ಪ ಮೂಡಿತು. ಇದರೊಂದಿಗೆ ಪ್ರಯೋಗಾಲಯ, ವಾಚನಾಲಯ ಹಾಗೂ ಗ್ರಂಥಾಲಯಗಳಿಗೂ ಯೋಜನೆ ರೂಪಿಸಲಾಯಿತು. ನಮ್ಮ ಈ ಯೋಜನೆ ಅನುಷ್ಠಾನವಾದುದು 2003ರಲ್ಲಿ. ಅಂದಿನ ರಾಷ್ಟ್ರ ಸೇವಿಕಾ ಸಮಿತಿಯ ಅಖಿಲ ಭಾರತ ಕಾರ್ಯವಾಹಿಕಾ ಮಾನನೀಯ ಪ್ರಮೀಳಾತಾಯಿ ಮೇಡೆಯವರ ಉಪಸ್ಥಿತಿಯಲ್ಲಿ (03.02.2003) ಶಿಲಾನ್ಯಾಸ ನೆರವೇರಿತು.






ಮಾಜಿ ಕೇಂದ್ರ ಸಚಿವ ಶ್ರೀ ಧನಂಜಯ ಕುಮಾರ್, ಮೈಸೂರಿನ ಶ್ರೀ ಜಗನ್ನಾಥ ಶೆಣೈ ಮತ್ತು ರಮಾನಾಥ ಶೆಣೈ ಇವರುಗಳ ಸಹಕಾರದಿಂದ ಕಟ್ಟಡದ ಕಾರ್ಯ ಪೂರ್ಣಗೊಂಡು ದಿನಾಂಕ 20.06.2004ರಂದು ಮಧುಕರ ಸಮುಚ್ಚಯ ಎಂಬ ಹೆಸರಿನಲ್ಲಿ ಉದ್ಘಾಟನೆಗೆ ಸಿದ್ಧಗೊಂಡಿತು. ಕೇಮಾರು ಸಾಂದೀಪನಿ ಆಶ್ರಮದ ಪೂಜ್ಯ ಶ್ರೀ ಈಶ ವಿಠಲದಾಸ ಸ್ವಾಮೀಜಿಯವರು ಉದ್ಘಾಟಿಸಿದರು. ಮುಂಬಯಿಯ ಎನ್‌ಕೌಂಟರ್ ಸ್ಪೆಷಲಿಸ್ಟ್ ಪೋಲೀಸ್ ಅಧಿಕಾರಿ ಶ್ರೀ ದಯಾನಾಯಕ್ ಅಧ್ಯಕ್ಷತೆ ವಹಿಸಿದ್ದರು. (ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ಸರಸಂಘಚಾಲಕ ಪ.ಪೂ ಮಧುಕರ ದತ್ತಾತ್ರೇಯ ದೇವರಸ್ ಇವರ ನೆನಪಿನಲ್ಲಿ **'ಮಧುಕರ'** ಎಂಬ ಹೆಸರಿದೆ.)

ಇಂದೀಗ 1000ದಷ್ಟು ವಿದ್ಯಾರ್ಥಿಗಳು ಏಕಕಾಲಕ್ಕೆ ಕುಳಿತುಕೊಳ್ಳಬಹುದಾದ ಸುಂದರ ಸಭಾಂಗಣ ದಿನನಿತ್ಯದ ಸರಸ್ವತಿ ವಂದನೆಯ ಮೆರುಗನ್ನು ಹೆಚ್ಚಿಸಿದೆ. ಆಸನ, ಧ್ಯಾನ, ಪ್ರಾಣಾಯಾಮ, ಸಂಗೀತ, ಅಗ್ನಿಹೋತ್ರ, ಚಿಂತನ ಮುಂತಾದ ಸಂಗತಿಗಳನ್ನು ಒಳಗೊಂಡ 20 ನಿಮಿಷದ ಕಾರ್ಯಕಲಾಪ ಈ ಅವಧಿಯನ್ನು ವೀಕ್ಷಿಸಿದವರೆಲ್ಲರ ಮನಸೂರೆಗೊಂಡಿದೆ. ಹಾಗೂ ವಿದ್ಯಾರ್ಥಿಗಳು "ತಮ್ಮ ಶೈಕ್ಷಣಿಕ ಸಾಧನೆಗೆ ಈ ಪ್ರಾರ್ಥನೆ ಮೆಟ್ಟಿಲಾಗಿದೆ" ಎಂಬುದನ್ನು ಹೆಜ್ಜೆ ಹೆಜ್ಜೆಗೆ ನೆನಪಿಸಿಕೊಳ್ಳುತ್ತಾರೆ.

**ಮಧುಕರ ವೃತ್ತಿ ಎನ್ನದು...**

ಇಂದು ಮಧುಕರವು ಮಧ್ಯಾಹ್ನದ ವಿದ್ಯಾರ್ಥಿಗಳ ಹಸಿವನ್ನು ನೀಗುವ ಭೋಜನಾಲಯವಾಗಿ, ಸಂಜೆಯ ಹೊತ್ತು ಒಳಾಂಗಣ ಕ್ರೀಡಾಭ್ಯಾಸ ಮಾಡುವವರ ಕ್ರೀಡಾಂಗಣವಾಗಿ, ಯೋಗ ಸಾಧಕರ ಸಾಧನಾಲಯವಾಗಿ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣಾಲಯವಾಗಿ ಹಾಗೂ ಸಂಘದ, ಸಮಿತಿಯ ಶಾಖೆ, ಬೈಠಕ್ ಮುಂತಾದ ಸಂಘಟನಾತ್ಮಕ ಕಾರ್ಯಗಳ ತಾಣವೂ ಆಗಿ ಎಲ್ಲರಿಗೂ ಪ್ರಿಯವಾದ "ಮಧು"ಕರವಾಗಿದೆ.

.....ಮುಂದುವರೆಯುವುದು

**ಸಾಮೂಹಿಕ ಹುಟ್ಟುಹಬ್ಬ 28.2.22**



ಫೆಬ್ರವರಿ ತಿಂಗಳಲ್ಲಿ ಹುಟ್ಟಿದ 9 ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ತಾಯಂದಿರು ಪುಟಾಣಿಗಳಿಗೆ ಆರತಿ ಬೆಳಗಿ, ತಿಲಕ ಇಟ್ಟು , ಅಕ್ಷತೆ ಹಾಕಿ, ಸಿಹಿ ನೀಡಿ ಶುಭ ಹಾರೈಸಿದರು. ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ರವಿರಾಜ್ ಶ್ರೀಮಾನ್ ಹುಟ್ಟುಹಬ್ಬ ಆಚರಣೆಯ ಬಗ್ಗೆ ತಿಳಿಸಿದರು. ಒಟ್ಟು 170 ಮಕ್ಕಳು 5 ಪಾಲಕರು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ

**ಕೇಶವನಗರದಲ್ಲಿ ಭಜನಾ ಕಾರ್ಯಕ್ರಮ 11.2.2022**



ಕೇಶವನಗರ ಶ್ರೀ ಶಾರದಾಂಬಾ ಭಜನಾ ಮಂದಿರದ 34 ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ ಕುಣಿತ ಭಜನೆ ಹಾಗೂ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಪೂರ್ವಗುರುಕುಲದ 21 ವಿದ್ಯಾರ್ಥಿಗಳು ಹಾಗೂ ಹಿರಿಯ ವಿಭಾಗದ 19 ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ**



12.2.22ರ ಭಜನಾ ಕಾರಕ್ರಮವನ್ನು 5ನೇ ತರಗತಿಯವರು ನಡೆಸಿಕೊಟ್ಟರು. ದಿನದ ಮಹತ್ವವನ್ನು ಶ್ರೀರಾಮ ಪದವಿ ವಿಭಾಗದ ಭೌತಶಾಸ್ತ್ರ ಉಪನ್ಯಾಸಕರಾದ ಶ್ರೀ ಸುಬ್ರಹ್ಮಣ್ಯ ತಿಳಿಸಿದರು. ಶ್ರೀರಾಮ ಪ.ಪೂ. ವಿಭಾಗದ ರಸಾಯನಶಾಸ್ತ್ರ ಉಪನ್ಯಾಸಕ ಶ್ರೀ ಅಭಿಲಾಷ್ ಆಳ್ವ, ಪೋಷಕರಾದ ಶ್ರೀಮತಿ ಭಾರತಿ, ಶ್ರೀಮತಿ ಲತಾ, ಶ್ರೀಮತಿ ಶ್ರೀದೇವಿ ಹಾಗೂ ಸಂಸ್ಕೃತ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಉಪಸ್ಥಿತರಿದ್ದರು.

## "ಜ್ಞಾನಧಾರಾ ಸಪ್ತಾಹ" ರಾಷ್ಟ್ರೀಯ ವಿಜ್ಞಾನ ದಿನಾಚರಣೆ 21.2.2022

ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪೂರ್ವಭಾವಿಯಾಗಿ ಜ್ಞಾನಧಾರಾ ಹೆಸರಿನಲ್ಲಿ ವಿಜ್ಞಾನ ಸಪ್ತಾಹ ಆಚರಿಸಲಾಯಿತು.

ಶ್ರೀರಾಮ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಮಹೇಶ್ವರ ಭಟ್ "ಜ್ಞಾನಧಾರಾ ಸಪ್ತಾಹ" ಎಂಬ ನಾಮಫಲಕವನ್ನು ಅನಾವರಣಗೊಳಿಸುವ ಮೂಲಕ ಚಾಲನೆ ನೀಡಿದರು. ಕೆ.ಎಸ್.ಆರ್.ಟಿ.ಸಿ ಚಾಲಕರಾದ ದಯಾನಂದ ಸಾಲಿಯಾನ್ ಹಾಗೂ ಹಿರಿಯ ವಿದ್ಯಾರ್ಥಿಯಾದ ಅಕ್ಷತಾ ಶೆಣೈ ಉಪಸ್ಥಿತರಿದ್ದರು.

ಎರಡನೆಯ ದಿನ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಅನಂತಪುರ ಗ್ರಾಮದ ವಿಕ್ರಮಾರ್ಜುನ ವಿದ್ಯಾ ಪ್ರಗತಿ ಸಂಸ್ಥೆಯ ಸಂಚಾಲಕರಾದ ಶ್ರೀ ರಾಜು ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ಮಂಜುನಾಥ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.



ದಿನಾಂಕ 28.2.2022ರಂದು "ಜ್ಞಾನಧಾರಾ ಸಪ್ತಾಹ" ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಸಮಾರೋಪ ನಡೆಯಿತು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪದ್ಮಶ್ರೀ ಪುರಸ್ಕೃತ ಶ್ರೀಯುತ ಅಮ್ಮೈ ಮಹಾಲಿಂಗ ನಾಯ್ಕರವರನ್ನು ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ ಗೌರವಿಸಲಾಯಿತು.

5ನೇ ತರಗತಿಯ ವೈಷ್ಣವಿ ಕಡ್ಯ 'ವಿಜ್ಞಾನ ಮತ್ತು ಭಾರತೀಯ ಸಂಪ್ರದಾಯ' ಎನ್ನುವ ವಿಷಯ ಮಂಡಿಸಿದಳು.



ಕಾರ್ಯಕ್ರಮದಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ನಂತರ ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನ ಹಾಗೂ ಮೈಮ್ ಶೋ ನಡೆಯಿತು.

ಒಂದು ವಾರ ನಡೆದ ಈ ಕಾರ್ಯಕ್ರಮದಲ್ಲಿ ದೇಶಿಯ, ಔಷಧೀಯ ಗುಣವುಳ್ಳ ದಾಸವಾಳ ಹೂವಿನ ಪಾನೀಯ, ಕಸ್‌ಕಸ್ ಪಾನೀಯ, ಪುನರ್‌ಪುಳಿ ಸಿಪ್ಪೆಯ ಪಾನೀಯ, ಮಾವಿನಕಾಯಿಯ ಪಾನೀಯ, ಅನಾನಸ್ ಪಾನೀಯ ಹಾಗೂ ಕರಿಮೆಣಸಿನ ಪಾನಕ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ಕ್ರಮವಾಗಿ ಮುಖ್ಯೋಪಾಧ್ಯಾಯರಾದ ಶ್ರೀರವಿರಾಜ್ ಕಣಂತೂರು, ಅಧ್ಯಾಪಕರಾದ ಶ್ರೀಮತಿ ಶಶಿಕಲಾ, ಶ್ರೀಮತಿ ದೇವಿಕಾ, ಶ್ರೀ ಬಾಲಕೃಷ್ಣ, ಶ್ರೀಮತಿ ಚೈತ್ರ ಎನ್ ಕೆ ಹಾಗೂ ಕು. ರಕ್ಷಿತಾ ನಡೆಸಿಕೊಟ್ಟರು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೂ ಈ ಪಾನೀಯವನ್ನು ಹಂಚಲಾಯಿತು.

ಹದಿನೈದು ತಳಿಗಳ 100 ಬಾಳೆಗೊನೆಗಳ ಪ್ರದರ್ಶನ, ತಿನ್ನಲು ಯೋಗ್ಯವಾದ ಕಾಡು ಹಣ್ಣುಗಳ ಪ್ರದರ್ಶನ, ಔಷಧಿ ಸಸ್ಯಗಳ ಪರಿಚಯದೊಂದಿಗೆ ಸರಿ ಸುಮಾರು 100 ಜಾತಿಗೆ ಸೇರಿದ ಹೂಗಳು, ಹತ್ತಾರು ಧವಸ ಧಾನ್ಯಗಳು ಹಾಗೂ ತರಕಾರಿಗಳು, ವಿವಿಧ ಬಗೆಯ ಎಳನೀರುಗಳ ಪ್ರದರ್ಶನ ಮತ್ತು ಮಾಹಿತಿಯನ್ನು ವಿದ್ಯಾರ್ಥಿಗಳು ನೀಡಿದರು.



ವೇದಿಕೆಯಲ್ಲಿ ಕಾಂಪ್ರಬೈಲು ಶ್ರೀಉಳ್ಳಾಲ್ತಿ ಅಮ್ಮನವರ ಕ್ಷೇತದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರಾದ ಶ್ರೀ ಜಯಾನಂದ ಆಚಾರ್ಯ, ವಿಟ್ಲ ಅರಸು ಮನೆತನದ ಶ್ರೀ ಕೃಷ್ಣಯ್ಯ ಕೆ, ನ್ಯಾಯವಾದಿ ಹಾಗೂ ನೋಟರಿ ಬಿ.ಸಿ ರೋಡ್ ಶ್ರೀ ಜಯರಾಮ ರೈ, ಇತಿಹಾಸ ಉಪನ್ಯಾಸಕರು ಹಾಗೂ ವಿಟ್ಲ ರೋಟರಿ ಘಟಕದ ಅಧ್ಯಕ್ಷರಾದ ಶ್ರೀ ಅಣ್ಣಪ್ಪ ಶಾಸ್ತಾನ, ವಿಟ್ಲ ವಿದ್ಯಾಪೋಷಕ ಸಮಿತಿಯ ಅಧ್ಯಕ್ಷರಾದ ಬಾಬು ಕೆ ವಿ, ದಕ್ಷಿಣ ಪ್ರಾಂತ ಮಾತೃಸೇವಿಕಾ ಸಮಿತಿಯ ಕಾರ್ಯಕಾರಿಣಿ ಸದಸ್ಯರಾದ ಡಾ. ಕಮಲಾ ಪ್ರಭಾಕರ ಭಟ್, ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು



**ಅಧ್ಯಾಪಕರ ಬೈಠಕ್ 16.2.2022**

ವಿಕ್ರಮ ಕೊಠಡಿಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರುರವರ ಮಾರ್ಗದರ್ಶನದಲ್ಲಿ ಅಧ್ಯಾಪಕರ ಬೈಠಕ್ ನಡೆಯಿತು. ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಬಗ್ಗೆ ಚರ್ಚಿಸಲಾಯಿತು.

**ರಾಷ್ಟ್ರೀಯ ವಿಜ್ಞಾನ ದಿನಾಚರಣೆ 28.02.22**

ಪ್ರೌಢಶಾಲಾ ವಿಭಾಗದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಅಧ್ಯಕ್ಷರಾಗಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಡಾ। ಪ್ರಭಾಕರ್ ಭಟ್, ಮುಖ್ಯ ಅತಿಥಿಗಳಾಗಿ ಸರಕಾರಿ ಪ್ರೌಢಶಾಲೆ ಪೊಳಲಿ ಇಲ್ಲಿಯ ಮುಖ್ಯೋಪಾಧ್ಯಾಯರಾದ ಶ್ರೀ ರಾಧಾಕೃಷ್ಣ ಭಟ್, NITK ಸುರತ್ಕಲ್ ಇಲ್ಲಿನ ರಸಾಯನ ಶಾಸ್ತ್ರ ವಿಭಾಗದ ಪ್ರೊಫೆಸರ್ ಶ್ರೀ ಅರುಣ್ ಎಂ ಇಸ್ಲೂರ್ ಭಾಗವಹಿಸಿದ್ದರು.




ಸಂಪನ್ಮೂಲ ವ್ಯಕ್ತಿಯಾಗಿ ಆರ್ಯಭಟ ಪ್ಲಾನಿಟೋರಿಯಮ್ ಬೆಂಗಳೂರು, ಇದರ ಸಹನಿರ್ದೇಶಕರು ಶ್ರೀ ಲಕ್ಷ್ಮೀಪತಿ, ಸಂಸ್ಥೆಯ ಸಂಚಾಲಕರಾದ ಶ್ರೀ ವಸಂತಮಾಧವ, ಸಹಸಂಚಾಲಕರಾದ ಶ್ರೀ ರಮೇಶ್ ಎನ್, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಶ್ರೀ ಸತೀಶ್ ರಾವ್ ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾರಾದ ಶ್ರೀಮತಿ ಶಾಂಭವಿ ಉಪಸ್ಥಿತರಿದ್ದರು.

**ಕಾರ್ಯಕ್ರಮದ ನಿಮಿತ್ತ ಏರ್ಪಡಿಸಿದ ವಿವಿಧ ಸ್ಪರ್ಧೆಗಳಲ್ಲಿ 20 ಪ್ರಾಥಮಿಕ ಶಾಲೆಯ 267 ವಿದ್ಯಾರ್ಥಿಗಳು, ಹಾಗೂ ಅಧ್ಯಾಪಕರು ಭಾಗವಹಿಸಿದರು.** ಅಟಲ್‌ಟಿಂಕರಿಂಗ್ ಲ್ಯಾಬ್‌ನಲ್ಲಿ ಏರ್ಪಡಿಸಿದ ಪ್ರದರ್ಶಿನಿಯನ್ನು ವೀಕ್ಷಿಸಿದ ಅತಿಥಿಗಳು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.



**ಸಮಾರೋಪ:** ಪ್ರೌಢಶಾಲೆಯ ನಿವೃತ್ತ ಹಿಂದಿ ಅಧ್ಯಾಪಕರಾದ ಶ್ರೀ ಗೋವಿಂದ ಭಟ್ ಉಪಸ್ಥಿತರಿದ್ದು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ರಾಕೆಟ್ ತಯಾರಿ ಕಾರ್ಯಾಗಾರ ಹಾಗೂ ವಿಡಿಯೋ ಪ್ರದರ್ಶನ ನಡೆಯಿತು. ಕಾರ್ಯಕ್ರಮದ ಕೊನೆಯಲ್ಲಿ ರಾಕೆಟ್ ಉಡಾವಣಾ ಪ್ರಾತ್ಯಕ್ಷಿಕೆ ನಡೆಯಿತು. ನಮ್ಮ ಸಂಸ್ಥೆಯ ವಿದ್ಯಾರ್ಥಿ ರಂಜಿತ್ ಸ್ವತಃ ತಯಾರಿಸಿದ ವಿಮಾನ ಹಾರಾಟದ ಪ್ರದರ್ಶನ ಎಲ್ಲರ ಮೆಚ್ಚುಗೆ ಪಡೆಯಿತು. ಕು.ಅನುಷಾ ಇವರು ಸಿ.ವಿ ರಾಮನ್‌ರವರ ಜೀವನ ಮತ್ತು ಸಾಧನೆಯನ್ನು ವಿವರಿಸಿದರು.

**ವಿವಿಧ ಶಾಲೆಗಳ ಸಂಪರ್ಕ:**

2022–23ನೇ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿ ದಿನಾಂಕ 7.02.22 ರಿಂದ 26.02.22 ರವರೆಗೆ ಸುತ್ತಮುತ್ತಲಿನ 41 ಸರಕಾರಿ, ಅನುದಾನಿತ, ಅನುದಾನಿತ ರಹಿತ ಹಿರಿಯ ಪ್ರಾಥಮಿಕ ಶಾಲೆಗಳನ್ನು ಶಿಕ್ಷಕರ ತಂಡ ಭೇಟಿ ಮಾಡಿ ಮಕ್ಕಳ ಮಾಹಿತಿಯನ್ನು ಪಡೆದು ನಮ್ಮ ಶಾಲಾ ಚಟುವಟಿಕೆಗಳ ಮಾಹಿತಿ ಹಂಚಿಕೊಂಡರು.

## ಪದವಿಪೂರ್ವ

**ಭಜನೆ, ಸಾಮೂಹಿಕ ಹುಟ್ಟುಹಬ್ಬ 28.2.22**



ಉಪನ್ಯಾಸಕ ಮತ್ತು ಉಪನ್ಯಾಸಕೇತರ ಬಂಧುಗಳಿಂದ ಭಜನಾ ಕಾರ್ಯಕ್ರಮ ಹಾಗೂ ಫೆಬ್ರವರಿ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಆಚರಿಸಲಾಯಿತು.

**ಎ.ಬಿ.ವಿ.ಪಿ ಭಿತ್ತಿ ಪತ್ರ ಬಿಡುಗಡೆ 10.2.22**



ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕರ್ನಾಟಕದ 47ನೇ ರಾಜ್ಯ ಸಮ್ಮೇಳನದ ಬಿತ್ತಿ ಪತ್ರ ಬಿಡುಗಡೆ ಕಾರ್ಯಕ್ರಮವನ್ನು ಪದವಿ ಪೂರ್ವ ವಿಭಾಗದ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಕರುಣಾಕರ ಇವರು ನೆರವೇರಿಸಿದರು.

**ಭಜನಾ ಕಾರ್ಯಕ್ರಮದಲ್ಲಿ ಭಾಗಿ 11.2.22**



ಶ್ರೀ ಶಾರದಾಂಬ ಭಜನಾ ಮಂದಿರ ಕೇಶವ ನಗರ ಅಮ್ಟೂರು ಇಲ್ಲಿ ನಡೆದ 34 ನೇ ವರ್ಷದ ವಾರ್ಷಿಕ ಭಜನಾ ಕಾರ್ಯಕ್ರಮದಲ್ಲಿ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು.

**ವಿಜ್ಞಾನ ದಿನಾಚರಣೆ 28.2.22**




ವಿಜ್ಞಾನ ಸಂಘದ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಮತ್ತು ವಿಜ್ಞಾನ ಮಾದರಿ ಪ್ರದರ್ಶನವನ್ನು ಗಣಿತಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮಿ ಮಾತಾಜಿ ಉದ್ಘಾಟಿಸಿ ವೈಜ್ಞಾನಿಕ ಮನೋಭಾವನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ವೇದಿಕೆಯಲ್ಲಿ ಪ್ರಾಂಶುಪಾಲರು ಮತ್ತು ವಿಜ್ಞಾನ ವಿಭಾಗದ ಶ್ರೀಮಾನ್ ಮತ್ತು ಮಾತಾಜಿಯವರು ಉಪಸ್ಥಿತರಿದ್ದರು. ಕು. ಪೃಥ್ವಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

## ಪದವಿ

**ದೇಶೀಯ ಆಟಗಳು 03.02.22**



ಭವಿಷ್ ಘಟಕ ವತಿಯಿಂದ ವಿದ್ಯಾರ್ಥಿಗಳಿಗೆ ಮಾನಸಿಕ ಸದೃಢತೆ, ಜ್ಞಾಪಕ ಶಕ್ತಿ, ಬುದ್ಧಿವಂತಿಕೆಗೆ ಸಂಬಂಧಿಸಿದ ಕೆಲವು ದೇಶೀಯ ಆಟಗಳನ್ನು ಆಡಿಸುವ ಮೂಲಕ ತರಗತಿಯನ್ನು ವಿನಿಯೋಗಿಸಿಕೊಳ್ಳಲಾಯಿತು.

**ಅಣಕು ಸಂದರ್ಶನ 04.02.22**



ಐ.ಕ್ಯೂ.ಎ.ಸಿ ಮತ್ತು ತರಬೇತಿ ಘಟಕದ ವತಿಯಿಂದ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಅಣಕು ಸಂದರ್ಶನ ಆಯೋಜಿಸಿ ಉದ್ಯೋಗಾಂಕ್ಷಿಗಳಿಗೆ ಪ್ರೇರಣೆ ಮತ್ತು ಧೈರ್ಯ ತುಂಬಲಾಯಿತು.

**ವಿದ್ಯಾರ್ಥಿವೇತನ ವಿತರಣೆ 04.02.22**

ಸೀತಾರಾಮ್ ಜಿಂದಾಲ್ ಫೌಂಡೇಶನ್ ಬೆಂಗಳೂರು ಇದರ ವತಿಯಿಂದ ನೀಡಲಾಗುವ ವಿದ್ಯಾರ್ಥಿವೇತನಕ್ಕೆ ಪ್ರಥಮ ಬಿ.ಎಸ್ಸಿ ವಿದ್ಯಾರ್ಥಿಯಾದ ದೇವಿಪ್ರಸಾದ್ ಆಯ್ಕೆಯಾಗಿದ್ದಾರೆ.

### ರಸಪ್ರಶ್ನೆ ಮತ್ತು ಚರ್ಚಾಕೂಟ 08.02.22



ಪದವಿ ವಿಭಾಗದ ದ್ವಿತೀಯ ಬಿ.ಎಸ್ಸಿ ವಿದ್ಯಾರ್ಥಿನಿ ಕು. ಹರ್ಷಿತಾ ಎಸ್ ಇವರು ಪದವಿಪೂರ್ವ ದ್ವಿತೀಯ ವಿಜ್ಞಾನ ವಿಭಗದ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮತ್ತು ಚರ್ಚಾಕೂಟ ಸ್ಪರ್ಧೆಯನ್ನು ಆಯೋಜಿಸಿದರು. ವಿದ್ಯಾರ್ಥಿಗಳಾದ ವಂಶಿ ಮತ್ತು ವಿದ್ಯಾಶ್ರೀ ಇವರು ಪ್ರಚಲಿತ ವಿದ್ಯಮಾನದ ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ವಿಜ್ಞಾನ ವಿಭಾಗದ ಉಪನ್ಯಾಸಕಿಯರಾದ ಶ್ರೀಮತಿ ಕವಿತಾ, ಶ್ರೀಮತಿ ಅಖಿಲಾ ಮತ್ತು ಕು. ದಿವ್ಯಶ್ರೀ ಮಾತಾಜಿ ಉಪಸ್ಥಿತರಿದ್ದರು.

### ಭವಿಷ್ ಘಟಕದ ಕಾರ್ಯಕ್ರಮ 23.02.22

ಭವಿಷ್ ಘಟಕದ ವತಿಯಿಂದ ವಿದ್ಯಾರ್ಥಿಗಳ ಕ್ರಿಯಾ ಶೀಲತೆ ಹೆಚ್ಚಿಸಿಕೊಳ್ಳಲು ಗುಂಪು ಚಟುವಟಿಕೆಗಳನ್ನು ಆಯೋಜಿಸಲಾಯಿತು.

### ಶಿಬಿರದಲ್ಲಿ ಭಾಗಿ 23.02.22

ಧಾರಾವಾಡದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿ ಸಂಪತ್ ಭಾಗವಹಿಸಿರುತ್ತಾರೆ.

### ವಿಠ್ಠಲ ಕಾಲೇಜಿನಲ್ಲಿ ರಸಪ್ರಶ್ನೆ 14.02.22



ವಿಠ್ಠಲ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿದ್ದು, ಪದವಿ ವಿಭಾಗದಲ್ಲಿರುವ ವಿವಿಧ ಸಂಯೋಜನೆಗಳ ಬಗ್ಗೆ ಪದವಿಯ ಬಿ.ಎಸ್ಸಿ ವಿಭಾಗದ ಅಖಿಲಾ ಮತ್ತು ಕವಿತಾ ಮಾತಾಜಿ ಮಾಹಿತಿ ನೀಡಿದರು.

### ರಾಷ್ಟ್ರೀಯ ವಿಜ್ಞಾನ ದಿನಾಚರಣೆ 28.02.22

**ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್‌ರವರು, ನೋಬೆಲ್ ಪ್ರಶಸ್ತಿ ಗಳಿಸಿದ, ಪ್ರಪ್ರಥಮ ಭಾರತೀಯ ವಿಜ್ಞಾನಿಯಾದ ಸಿ.ವಿ.ರಾಮನ್ ರವರ ಸಾಧನೆಯ ಬಗ್ಗೆ ಮಾತನಾಡಿದರು.**

### ಸಮಾವೇಶ–ಸಂವಾದ ಕಾರ್ಯಕ್ರಮ 17.02.22



ವಿವೇಕಾನಂದ ಕಾಲೇಜಿನಲ್ಲಿ ವಿದ್ಯಾಭಾರತಿಗೆ ಸಂಲಗ್ನಗೊಂಡ ಶಿಕ್ಷಣ ಸಂಸ್ಥೆಗಳ ಹಿರಿಯ ವಿದ್ಯಾರ್ಥಿಗಳ ಸಮಾವೇಶ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಪದವಿ ಹಿರಿಯ ವಿದ್ಯಾರ್ಥಿ ಸಂಘದ 5 ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ವಿಶ್ವ ಮಾತೃ ಭಾಷಾ ದಿವಸ್ 21.02.22



ವಿಶ್ವ ಮಾತೃ ಭಾಷಾ ದಿನದ ಪ್ರಯುಕ್ತ ಪ್ರಜ್ಞಾನ ಸಂಘದ ವತಿಯಿಂದ ತುಳು ಭಾಷೆಯ ಮಹತ್ವವನ್ನು ತಿಳಿಸಿಕೊಡುವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ತುಳು ಭಾಷಾ ನಿರೂಪಕರಾದ ಶ್ರೀ ರಾಜೇಶ್ ಕೊಟ್ಟಾರಿಯವರು ಆಗಮಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಂತರಿಕ ಗುಣಮಟ್ಟ ಮೌಲ್ಯ ವರ್ಧನ ಕೋಶ ಇದರ ನಿರ್ದೇಶಕರಾದ ಶ್ರೀಮತಿ ಸುಕನ್ಯಾ ಮಾತಾಜಿಯವರು ವಹಿಸಿದ್ದರು. ವೇದಿಕೆಯಲ್ಲಿ ಸಾಹಿತ್ಯ ಸಂಘದ ನಿರ್ದೇಶಕಿ ಹಾಗೂ ಅರ್ಥಶಾಸ್ತ್ರ ಉಪನ್ಯಾಸಕಿಯಾದ ಕು. ಸಂಧ್ಯಾ ಮಾತಾಜಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಹಿತೇಶ್ ಸ್ವಾಗತಿಸಿ, ಮಧುರಾ ವಂದಿಸಿ, ಕು. ಹರ್ಷಿತಾ ನಿರೂಪಿಸಿದರು.

### ಇಂಡಸ್ಟ್ರಿಯಲ್ ವಿಸಿಟ್ 28.02.22




ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಪದವಿ ವಿಭಾಗದ ಬಿಎಸ್ಸಿ ಹಾಗೂ ಬಿಸಿಎ ವಿದ್ಯಾರ್ಥಿಗಳಿಗೆ "ಇಂಡಸ್ಟ್ರಿಯಲ್ ವಿಸಿಟ್" ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳು ದಕ್ಷಿಣ ಕನ್ನಡದ ಪ್ರತಿಷ್ಠಿತ ಕೈಗಾರಿಕೆ ಉದ್ಯಮಗಳಾದ MCF, KIOCL, KMFಗೆ ಭೇಟಿ ಕೊಟ್ಟು ಅಲ್ಲಿನ ಉತ್ಪನ್ನಗಳ ಮಾಹಿತಿ, ತಯಾರಿಕೆ ಹಾಗೂ ಸಂಸ್ಕರಣ ಘಟಕಗಳನ್ನು ವೀಕ್ಷಿಸಿದರು. ಅಂತೆ–ಯೇ ಕದ್ರಿ ಮಂಜುನಾಥೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ಈ ಪ್ರವಾಸದಲ್ಲಿ ಒಟ್ಟು 43 ವಿದ್ಯಾರ್ಥಿಗಳು 8 ಉಪನ್ಯಾಸಕರು ಭಾಗವಹಿಸಿರುತ್ತಾರೆ.

### ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಅಮೈ ಶ್ರೀ ಮಹಾಲಿಂಗ ನಾಯ್ಕ ಅವರೊಂದಿಗೆ ಸಂವಾದ ಕಾರ್ಯಕ್ರಮ 28.02.22



ಪ್ರಭಾಸ ಮಾನವಿಕ ಸಂಘದ ವತಿಯಿಂದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಅಮೈ ಶ್ರೀ ಮಹಾಲಿಂಗ ನಾಯ್ಕ ಅವರೊಂದಿಗೆ ಸಂವಾದ ಕಾರ್ಯಕ್ರಮವು ಪ್ರೇರಣಾ ಸಭಾಭವನದಲ್ಲಿ ನಡೆಯಿತು. ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಅಮೈ ಶ್ರೀ ಮಹಾಲಿಂಗ ನಾಯ್ಕ ಇವರನ್ನು ಶಾಲು ಹೊದಿಸಿ ಗೌರವಿಸಲಾಯಿತು. ಶ್ರೀರಾಮ ವಿದ್ಯಾ ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್, ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್. ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಕಾಯರ್ ಕಟ್ಟೆರವರು ಉಪಸ್ಥಿತರಿದ್ದರು. .

### ಯುದ್ಧ ಸ್ಮಾರಕಕ್ಕೆ ಭೇಟಿ 28.02.2022



ಆಜಾದಿ ಕಾ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ದ.ಕ. ಜಿಲ್ಲೆಯ ಯುದ್ಧ ಸ್ಮಾರಕ (ಕದ್ರಿಯಲ್ಲಿರುವ) ಭೇಟಿ ನೀಡಿ ಪುಷ್ಪಾರ್ಚನೆಗೈದು ಹುತಾತ್ಮರಾದ ಸೈನಿಕರಿಗೆ ನಮನವನ್ನು ಸಲ್ಲಿಸಿದರು.



ಶ್ರೀ ಶಾರದಾಂಬ ಭಜನಾ ಮಂದಿರ ಕೇಶವನಗರ ಇಲ್ಲಿ 11.02.22ರಂದು ನಡೆದ 34ನೇ ಭಜನಾ ವಾರ್ಷಿಕೋತ್ಸವದಲ್ಲಿ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು.




**ಸಾಹಸಿ ವೀರ ವಿಕ್ರಂ ಭಾಥ್ರನ ಕಥೆ 17.02.22**

ವಿದ್ಯಾಭಾರತಿ ಅ.ಭಾ.ಸಂ ಕಾರ್ಯದರ್ಶಿ ಶ್ರೀ ಕಾಶಿಪತಿ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮನಾಗಿ ದೇಶಕ್ಕೆ ವಿಜಯ ತಂದ, ವೀರ ಪರಾಕ್ರಮಿಯಾದ ವಿಕ್ರಂ ಭಾಥ್ರರವರ ಕಥೆಯನ್ನು ಹೇಳಿದರು.




**ರಾಷ್ಟ್ರೀಯ ವಿಜ್ಞಾನ ದಿನಾಚರಣೆ 28.02.2022**

ಭಾರತ ರತ್ನ ಡಾ. ಸಿ.ವಿ ರಾಮನ್ ಜನ್ಮ ದಿನಚರಣೆಯ ಅಂಗವಾಗಿ ಆಯೋಜಿಸಿದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯಲ್ಲಿ ಡಾ. ಪ್ರಭಾಕರ ಭಟ್ ಕಲ್ಲಡ್ಕ

## ಪದವಿಪೂರ್ವ




**ಕಿರು ಪ್ರವಾಸ** :ಫೆ. 4, 11,15 2022ರಂದು ದ್ವಿ. ಪ.ಪೂರ್ವ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸದಲ್ಲಿ ಉಡುಪಿ, ಮಂಗಳೂರು ವ್ಯಾಪ್ತಿಯ ವಿವಿಧ ಕೈಗಾರಿಕಾ ಕೇಂದ್ರ ಐತಿಹಾಸಿಕ ಕೇಂದ್ರ, ವಿಜ್ಞಾನ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ–ದರು.



**ಸೂರ್ಯ ನಮಸ್ಕಾರ 5.02.2022:** ರಥಸಪ್ತಮಿ ನಿಮಿತ್ತ ನಡೆಯುವ ಸೂರ್ಯನಮಸ್ಕಾರ ಯಜ್ಞದ ಪೂರ್ವಭಾವಿಯಾಗಿ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಸೂರ್ಯನಮಸ್ಕಾರ ಅಭ್ಯಾಸ ಮಾಡಿದರು.



**ಉಪನ್ಯಾಸ ಕಾರ್ಯಕ್ರಮ 08.02.22:** ಭಾರತದ ಹಿರಿಮೆ ಗರಿಮೆ ವಿಷಯದ ಕುರಿತು ಭಾರತ ಸರಕಾರದ ನಿವೃತ್ತ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಶ್ರೀ ಸಿ. ವಿ. ಗೋಪಿನಾಥ್ ಉಪನ್ಯಾಸ ನಡೆಸಿಕೊಟ್ಟರು.



**ಪ್ರೌಢಶಾಲಾ ಭೇಟಿ:**

ಫೆ 12, 19ರಂದು ಶ್ರೀಮತಿ ಚೈತನ್ಯ, ಶ್ರೀ ಅಶೋಕ್ ಕುಮಾರ್, ಶ್ರೀ ಕರುಣಾಕರ್ ಇವರು ಅಳಿಕೆ ಸತ್ಯಸಾಯಿ ಪ್ರೌಢಶಾಲೆ, ಸರಕಾರಿ ಪ್ರೌಢಶಾಲೆ ಕೇಪು, ಶ್ರೀದೇವಿ ಪ್ರೌಢಶಾಲೆ ಪುಣಚಕ್ಕೆ ಭೇಟಿ ನೀಡಿದರು.



**ವೃತ್ತಿಪರ ಮಾರ್ಗದರ್ಶನ 26.2.22:**

ತಾಂತ್ರಿಕ ತರಬೇತಿ ಕೇಂದ್ರ ವಿಟ್ಲದ ಪ್ರಾಂಶುಪಾಲರಾದ ಶ್ರೀ ರಮೇಶ್ ಅವರು ಪದವಿಪೂರ್ವ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ವೃತ್ತಿಪರ ಮಾರ್ಗದರ್ಶನ ನೀಡಿದರು.



**ಪರೀಕ್ಷಾ ತಯಾರಿ 28.2.22:**

ವಿಜ್ಞಾನ ದಿನಾಚರಣೆಯ ಪ್ರಯುಕ್ತ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಸಿಇಟಿ ವ್ಯವಸ್ಥಾಪಕರಾದ ಡಾ. ಶ್ರುತಕೀರ್ತಿ ರಾಜ್ ಇವರು ಪರೀಕ್ಷಾ ತಯಾರಿ ಮತ್ತು ವೃತ್ತಿಪರ ಮಾರ್ಗದರ್ಶನ ನೀಡಿದರು.

## ಪದವಿ



**ಎ.ಬಿ.ವಿ.ಪಿ ಅಭ್ಯಾಸ ವರ್ಗದಲ್ಲಿ ಭಾಗಿ 05.02.22**

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಇದರ ಅಭ್ಯಾಸ ವರ್ಗವು ಗೀತಾಂಜಲಿ ಕಲ್ಯಾಣ ಮಂಟಪ ಬಿ.ಸಿ.ರೋಡ್ ನಲ್ಲಿ ನಡೆದಿದ್ದು ನಮ್ಮ ಕಾಲೇಜಿನ 35 ಮಂದಿ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.



**ಮಾಹಿತಿ ಕಾರ್ಯಾಗಾರ. 08.02.22:** ಉದ್ಯೋಗ ಮತ್ತು ತರಬೇತಿ ಘಟಕ ವತಿಯಿಂದ "ಜೀವನದ ಗುರಿಯನ್ನು ಸಾಧಿಸುವುದು ಹೇಗೆ?" ಎಂಬ ವಿಷಯದ ಕುರಿತು ಶ್ರೀ ಸಿ. ವಿ. ಗೋಪಿನಾಥ್ ಅವರು ವಿಶೇಷ ಉಪನ್ಯಾಸ ನಡೆಸಿಕೊಟ್ಟರು.



**ವಿಶ್ವ ಮಾತೃ ಭಾಷಾ ದಿವಸ್ 21.02.22**

ದಿನನಿತ್ಯ ತಮ್ಮ ಮನೆಯಲ್ಲಿ ಮಾತನಾಡುವ ಭಾಷೆ ಉಳಿದರೆ ನಮ್ಮತನ ಉಳಿದೀತು ಎಂದು ಶ್ರೀಮತಿ ಸುಧಾ ಭಟ್ ನುಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಯತಿರಾಜ್ ಪಿ., ಶ್ರೀ ರಂಜಿತ್ ಉಪಸ್ಥಿತರಿದ್ದರು.




**ಕಂಪೆನಿ ಸೆಕ್ರೆಟರಿಯ ಮಾಹಿತಿ 08.02.22:**

ಪ್ರಭೋದ ವಾಣಿಜ್ಯ ಸಂಘದಿಂದ ಆಯೋಜಿಸಲಾದ ಕಂಪೆನಿ ಸೆಕ್ರೆಟರಿಯ ಬಗ್ಗೆ ಮಾಹಿತಿಯನ್ನು ಸಿ.ಎಸ್.ಇ.ಇ.ಟಿ ಇದರ ಸದಸ್ಯರಾದ ಶ್ರೀ ರೂಪೇಶ್ ಥೋಮಸ್, ಶ್ರೀ ದೀಕ್ಷಿತ್ ಮತ್ತು ಪ್ರಿಯಾಂಕ ನೀಡಿದರು.



**ಉಪನ್ಯಾಸಕರ ವಿದ್ಯಾಕೇಂದ್ರ ಭೇಟಿ 14.02.22**

ವಿದ್ಯಾಕೇಂದ್ರದ ವಿವಿಧ ವಿಭಾಗಗಳಾದ ಅಟಲ್ ಟಿಂಕರಿಂಗ್ ಲ್ಯಾಬ್, ಶಿಶು ಮಂದಿರ, ಪೂರ್ವ ಗುರುಕುಲ, ಪ್ರಾಥಮಿಕ ಶಾಲೆಯ ಕಂಪ್ಯೂಟರ್ ಲ್ಯಾಬ್, ವಿಜ್ಞಾನ ಲ್ಯಾಬ್‌ಗೆ ಭೇಟಿ ನೀಡಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ವೀಕ್ಷಿಸಿದರು.




**ವಾರ್ಷಿಕ ಕ್ರೀಡಾಕೂಟ 26.02.22**

ಇಂದ್ರಪ್ರಸ್ಥ ಪ.ಪೂ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಚ್. ಕೆ. ಪ್ರಕಾಶ್ ಇವರು ದೀಪ ಬೆಳಗಿ ಉದ್ಘಾಟಿಸಿದರು. ನಿವೃತ್ತ ಸೈನಿಕರಾದ ಶ್ರೀ ಮಾಧವ ಪಾಳ್ಯ ಪಿ ಮಾಣಿ ಇವರು ಧ್ವಜಾರೋಹಣಗೈದರು. ಡಾ ಪ್ರಭಾಕರ್ ಭಟ್ ಕಲ್ಲಡ್ಕ, ಸತ್ಯಸಾಯಿ ವಿದ್ಯಾಕೇಂದ್ರದ ದೈ. ಶಿಕ್ಷಕರಾದ ಶ್ರೀ ಪ್ರಣಾಮ್ ಉಪಸ್ಥಿತರಿದ್ದರು.

**ವಿದ್ಯಾಭಾರತಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಜೆ.ಎಂ ಕಾಶೀಪತಿ ಭೇಟಿ.**

ದಿನಾಂಕ 16.02.2022ರಂದು ಶ್ರೀಯುತರು ಕರ್ನಾಟಕ ಪ್ರಾಂತ ಪ್ರವಾಸದ ಸಂದರ್ಭದಲ್ಲಿ ನಮ್ಮ ವಿದ್ಯಾಸಂಸ್ಥೆಯ ಶಿಕ್ಷಕ ವೃಂದದವರೊಂದಿಗೆ ಭಾಗವಹಿಸಿ ಮಾರ್ಗದರ್ಶನ ಮಾಡಿದರು.



ವಿವಿಧ ವಿಭಾಗಗಳ ಶಿಕ್ಷಕರ ಸ್ತರಕ್ಕನುಗುಣವಾಗಿ ಚಟುವಟಿಕೆಯುಕ್ತ ಕಾರ್ಯಕ್ರಮಗಳನ್ನು ನಡೆಸಿ ವಿದ್ಯಾರ್ಥಿಗಳಲ್ಲಿ ಆಜಾದಿ ಕಾ ಅಮೃತ ಮಹೋತ್ಸವದ ಭಾವನೆಯನ್ನು ಜಾಗೃತಗೊಳಿಸುವ ವಿವಿಧ ಪ್ರಯೋಗಗಳನ್ನು ಮಾಡುವಂತೆ ಸಲಹೆ ನೀಡಿದರು. ಅಲ್ಲದೆ ನಮ್ಮೊಳಗಿನ ಪ್ರಶ್ನಿಸುವ ಗುಣ ವೃದ್ಧಿಗೆ ಬೇಕಾದ ಮಾನಸಿಕತೆಯನ್ನು ಸಿದ್ಧಗೊಳಿಸುವ ಬಗೆಯನ್ನು ವಿವರಿಸಿದರು. ಪ್ರಾಂತ ಸಂಘಟನಾ ಕಾರ್ಯದರ್ಶಿ ಶ್ರೀ ಉಮೇಶ್ ಜೊತೆಗಿದ್ದರು.

## ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಶ್ರೀ ಮಹಾಲಿಂಗ ನಾಯ್ಕರ ಮನದಾಳದ ಮಾತುಗಳು



* ಶಾಲಾ ಚಟುವಟಿಕೆಗಳು ನಿಜವಾಗಿ ಅತ್ಯದ್ಭುತವಾಗಿದೆ. ಈ ರೀತಿಯ ಶಿಕ್ಷಣವನ್ನು ಪಡೆಯುವ ನಿಜಕ್ಕೂ ನೀವು ಭಾಗ್ಯವಂತರು

* ಎಲ್ಲಾ ವಿದ್ಯಾರ್ಥಿಗಳು ಕೂಡಾ ಪರಿಸರವನ್ನು ಪ್ರೀತಿಸಬೇಕು ಮತ್ತು ಪ್ರತಿಯೊಂದು ಮಗು ಕೂಡಾ ಪರಿಸರಕ್ಕೆ ಒಂದು ವಿಜ್ಞಾನಿಯೇ ಆಗಿದೆ.

* ಸರ್ಕಾರ ಗುರುತಿಸಿ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಹೆಮ್ಮೆಯ ವಿಷಯ. ಇದು ನನಗೆ ಸಿಕ್ಕ ಪ್ರಶಸ್ತಿ ಅಲ್ಲ ಇಡೀ ದೇಶಕ್ಕೆ ಸಿಕ್ಕ ಗೌರವ.

* ಎಲ್ಲದಕ್ಕೂ ಮೂಲ ಆಧಾರ ನೀರು. ಹಾಗಾಗಿ ಎಲ್ಲರೂ ನಿಮ್ಮ_ನಿಮ್ಮ ಮನೆಗಳಲ್ಲಿ ಇಂಗು ಗುಂಡಿ ನಿರ್ಮಾಣ ಮಾಡುವ ಮೂಲಕ ನೀರನ್ನು ಉಳಿಸುವ ಕಾರ್ಯವನ್ನು ಮಾಡಬೇಕಾಗಿದೆ.

* ಪ್ರಯತ್ನವೇ ಜೀವನದ ಜೀವಾಳ. ಪ್ರಯತ್ನಪಟ್ಟರೆ ಖಂಡಿತಾ ಯಶಸ್ಸು ಸಾಧ್ಯ ಎನ್ನುತ್ತ ತಾನು ಸುರಂಗ ಅಗೆದ ಸಾಹಸದ ಕಥೆಯನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.



ರಾಷ್ಟ್ರೀಯ ವಿಜ್ಞಾನ ದಿನದ ನಿಮಿತ್ತ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಹಮ್ಮಿಕೊಂಡಿದ್ದ ಜ್ಞಾನಧಾರಾ ಕಾರ್ಯಕ್ರಮದಲ್ಲಿ ಹಿರಿಯರಾದ ಡಾ. ಪ್ರಭಾಕರ ಭಟ್ ಹಾಗೂ ಇತರ ಗಣ್ಯ ಮಹನೀಯರ ಸಮ್ಮುಖದಲ್ಲಿ ಶ್ರೀ ಮಹಾಲಿಂಗ ನಾಯ್ಕರಿಗೆ ಗೌರವಾರ್ಪಣೆ.

ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ, ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 8 Issue : 10 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363